Regd No B G 155 21-1-1970

SATYAVADI Daily, MYSORE 4 ‡ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸ್ಥಾಪಕರು: ಆರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಕಾರ್ಮಿಕರ ಮುಷ್ಕರ ಮತ್ತು ಅನಶನ ಸತ್ಯಾಗ್ರಹ

ಶಿಕ್ಷಣ ಮಾಧ್ಯಮ

ಹುಬ್ಬಳ್ಳಿ— ಭಾರತ ವಿಶ್ವವಿದ್ಯಾಲಯಗಳಲ್ಲಿ ಇಂಗ್ಲೀಷು ಮಾಧ್ಯಮ ಬದಲು ಆಯಾ ಪ್ರಾದೇಶಿಕ ಭಾಷೆಗಳನ್ನು ಶಿಕ್ಷಣ ಮಾಧ್ಯಮವಾಗಿ ಜಾರಿಗೆ ತರುವ ಆಶಯವನ್ನು ಬೆಂಗಳೂರು ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಡಾ|| ಗೋಕಾಕ್‌ರವರು ವ್ಯಕ್ತಪಡಿಸಿದರು.

●

2.5 ಮಿಟರು ವ್ಯಾಸದ ಕೊಳವೆ

ಡಾರ್ಟಮಂಡ್ (ಡಾಡ್)— ಇದುವರೆಗೂ ಓಕ್ಸ್ ವ್ಯಾರ್ಗ ಕಂಪೆನಿಯು ಪ್ರತ್ಯೇಕವಾಗಿ 2.5 ಮಿಟರು ವ್ಯಾಸದ ಕೊಳವೆಗಳನ್ನು ತಯಾರಿಸುತ್ತಿತ್ತು ಇದರಲ್ಲಿ ಒಂದು ಕಾರು ಕೂಡ ಹೋಗುವಷ್ಟು ಸ್ಥಳಾವಕಾಶವಿರುತ್ತದೆ.

○

ಸರ್ವೇಶ್ವರನ ವಚನಗಳು

ಬೇಸಿಗೆಯ ದಿನದಲ್ಲಿ ಕಾವು ಹೆಚ್ಚು
ಪರೀಕ್ಷೆಯ ಹಾಲಿನಲಿ ದಾಹ ಹೆಚ್ಚು
ಅಧಿಕಾರ ಪೀಠದಲ್ಲಿ ಬಾಯಿ ಹೆಚ್ಚು
ನಿಧಿಯ ಪಕ್ಕದಲಿ ಹಾವು ಹೆಚ್ಚು
ಕೈಸಾಗದಾಗ ರೊಚ್ಚು ಹೆಚ್ಚು ಸರ್ವೇಶ್ವರ

(ಕನ್ನಡ ನುಡಿ) ಡಿ. ಲಿಂಗಯ್ಯ

ಗಣರಾಜ್ಯೋತ್ಸವ

ನವದೆಹಲ್ಲಿ— ಈ ವರ್ಷದ ಗಣರಾಜ್ಯೋತ್ಸವದಲ್ಲಿ ಸುಮಾರು ಸುಡೆಯ 156 ವಿವಾನಗಳು ಭಾಗವಹಿಸುತ್ತವೆಂದು ಪ್ರಕಟವಾಗಿದೆ.

★

ಕತ್ತೆ ಮೆರವಣಿಗೆ

ನಾಗಪುರ— ರಾಷ್ಟ್ರೀಯ ಬ್ಯಾಂಕುಗಳಿಂದ ಸಾಲಾ, ನಗರಾಭಿವೃದ್ಧಿ ಸಮಿತಿಯಿಂದ ಮನೆ ನಿರ್ಮಾಣದ ಕೆಲಸಕ್ಕೆ ಹಾಕಿ, ಕುಂಬಾರರು, ಇಟ್ಟಿಗೆ ಮತ್ತು ಹಂಚು ತಯಾರಿಸುವವರು 100 ಕತ್ತೆಗಳ ಮೆರವಣಿಗೆಯನ್ನು ಮುಖ್ಯ ಬೀದಿಗಳಲ್ಲಿ ನಡೆಸಿ ನಂತರ ಕಲೆಕ್ಟರರಿಗೆ ಮನವಿಪತ್ರ ಅರ್ಪಿಸಿದರು.

○

ಎಳ್ಳಮಾಸ್ಯೆ

ತೀರ್ಥಹಳ್ಳಿ— ತಾ || 7 ರಂದು ಇಲ್ಲಿ ಎಳ್ಳಮಾವಾಸ್ಯೆ ಸಂತೆ ನಡೆಯಿತು; ಪರಶುರಾಮ ತೀರ್ಥದಲ್ಲಿ ಸಹಸ್ರಗಟ್ಟಲೆ ಯಾತ್ರಿಕರು ಸ್ನಾನ ಮಾಡಿದರು — ಶ್ರೀ ರಾಮೇಶ್ವರ ಸ್ವಾಮಿ ರಥೋತ್ಸವ ನಡೆಯಿತು.

ತಲವಾಡಿ ಫಿರ್ಕಕ್ಕಾಗಿ

ಬೆಂಗಳೂರು— ಕೊಯಮುತ್ತೂರು ಜಿಲ್ಲೆಯ ತಲವಾಡಿ ಫಿರ್ಕಾವನ್ನು ಮೈಸೂರು ರಾಜ್ಯಕ್ಕೆ ಸೇರ್ಪಡೆ ಮಾಡುವ ಖಂಡಿತ ನಿರ್ಧಾರ ತೆಗೆದುಕೊಳ್ಳದಿದ್ದರೆ, ತಾ 28 ರಿಂದ, ಕರನಿರಾಕರಣೆ, ಅನ್ನ ಸತ್ಯಾಗ್ರಹ ಸೇರಿದ ಭಾರಿ ಚಳವಳಿ ಹೂಡುವುದಾಗಿ ಅಲ್ಲಿಯ ಬ್ಲಾಕ್ ಕೌನ್ಸಿಲ್ ಅಧ್ಯಕ್ಷರು, ಇತರ ಸಂಘ ಸಂಸ್ಥೆಗಳವರು ಪ್ರಧಾನಿ ಇಂದಿರಾರವರಿಗೆ ಮನವಿ ಅರ್ಪಿಸಿರುವರು.

★

ಸಭಾಪರಿತ್ಯಾಗ

ಬೆಂಗಳೂರು— ಕಳೆದ ವಾರ ಚಿಂತಾಮಣಿಯಲ್ಲಿ ನಡೆದ ಪೋಲೀಸು ಗೋಳೀಬಾರು ಸಂಬಂಧದಲ್ಲಿ ಶಾಸನಸಭೆಯಲ್ಲಿ ಅವಸರ ಸೂಚನೆಗೆ ನಿನ್ನೆ ಸ್ಪೀಕರರು ಅವಕಾಶ ಕೊಡದಿದ್ದರಿಂದ, ಇಬ್ಬರು ಜನಸಂಘದ ಮತ್ತು ಇಬ್ಬರು ಸ್ವತಂತ್ರ ಪಕ್ಷದ ಸದಸ್ಯರನ್ನು ಬಿಟ್ಟು ಮಿಕ್ಕೆಲ್ಲ ವಿರೋಧಿಗಳೂ ಸಭಾಪರಿತ್ಯಾಗ ಮಾಡಿದರು.

○

ಶಾಸನಸಭೆಯಲ್ಲಿ

ಬೆಂಗಳೂರು— ಶಾಸನಸಭೆಯಲ್ಲಿ 23 ಸದಸ್ಯರುಳ್ಳ ಹೊಸ ಕಾಂಗ್ರೆಸ್ ನಾಯಕರನ್ನು ವಿರೋಧ ನಾಯಕರಾಗಿ ಕರೆಯಲ್ಲ ಡಬೇಕೆಂದೂ, ಹೊಸ ಕಾಂಗ್ರೆಸ್ ಸದಸ್ಯರಿಗೆ ಪ್ರತ್ಯೇಕ ಸ್ಥಾನಗಳ ಏರ್ಪಾಟಾಗಬೇಕೆಂದೂ ಜನತಾ ಪಕ್ಷದ ಮೂರು ಮುಂದಿ ಸದಸ್ಯರಿಗೆ ಪ್ರತ್ಯೇಕ ಸ್ಥಾನಗಳು ಏರ್ಪಾಟಾಗಬೇಕೆಂದೂ ಬಂದಿರುವ ಮನವಿಗಳನ್ನು ಇನ್ನೊಂದೆರಡು ದಿನಗಳಲ್ಲಿ ಇತ್ಯರ್ಥ ಮಾಡುವುದಾಗಿ ಸ್ಪೀಕರರು ತಿಳಿಸಿದರು — ಹೊಸ ಕಾಂಗ್ರೆಸ್ಸಿನವರು ವಿರೋಧ ನಾಯಕರಾಮಿ, ಈಗ ಪಿಎಸ್ಪಿಗಿರುವ ಈ ಸ್ಥಾನದ ತಪ್ಪವೆದು

★

ಒತ್ತಾಯಕ್ಕಾಗಿ ಕಾರ್ಮಿಕರ ಕಾರ್ಯ

ಬೆಳಗಾಂ— ತಮ್ಮ ಕೇಳಿಕೆಯ ಒತ್ತಾಯಕ್ಕಾಗಿ, ಇಲ್ಲಿಯ ಅಲ್ಯೂಮಿನಿಯಂ ಕಂಪೆನಿಯಲ್ಲಿ ಕೆಲಸಮಾಡುತ್ತಿರುವ ಬಂಗಾಳ-ಬೀಹಾರ್ ಕರ್ಮಚಾರಿಗಳು 425 ಕಾರ್ಮಿಕರು ಡಿಸೆಂಬರು 24 ರಿಂದ ಮುಷ್ಕರ ಹೂಡಿರುವರು — ಒಂದು ವಾರದಿಂದ ಆರು ಮಂದಿ ಅನ್ನಸತ್ಯಾಗ್ರಹ ಕೈಗೊಂಡಿರುವರು.

★

ಗೌರ್ನರರಿಗೆ 64 ವರ್ಷ

ಬೆಂಗಳೂರು— ಗೌರ್ನರ್ ಶ್ರೀ ಧರ್ಮವೀರರವರ 64 ನೇ ಜನ್ಮದಿನೋತ್ಸವ ಸಂದರ್ಭದಲ್ಲಿ ನಿನ್ನೆ ಮುಖ್ಯಮಂತ್ರಿಗಳು ಸಂತೋಷದ ಟೀಪಾರ್ಟಿ ಏರ್ಪಡಿಸಿದ್ದರು — ಹಲವು ಮಂತ್ರಿಗಳೂ, ಉನ್ನತಾಧಿಕಾರಿಗಳು, ಸಮಾಜಕರ್ತರೂ, ಪತ್ರಿಕೋದ್ಯೋಗಗಳೂ ಬಂದಿದ್ದರು — ಗೌರ್ನರರು ಬರ್ತ್‌ಡೇ ಕೇಕ್ ಕತ್ತರಿಸಿ, ಅತಿಥಿಗಳೊಡನೆ ಸಂಭಾಷಣೆ ನಡೆಸಿದರು

○

ಸಿಗರೇಟು ಬೆಲೆ ಏರಿತು

ಬಡ್ಜೆಟ್ ಅಧಿವೇಶನವು ಇನ್ನೂ ಮೂರು ವಾರಗಳಿದ್ದರೂ ಈಗಲೇ ಜನಪ್ರಿಯ ಸಿಗರೇಟುಗಳ ಬೆಲೆ ಏರಿದೆ.

★

ಅಗ್ನಿಗೆ ಆಹುತಿ

ಶ್ರೀನಗರ— ಬಾಲಭಂಡಾರಪೋರದಲ್ಲಿ ನಿನ್ನೆ ಆದ ಅಗ್ನಿ ಅನಾಹುತದಲ್ಲಿ ರೊಟ್ಟೀ ತಯಾಸುವವನ ಮನೆಯಲ್ಲಿ 8 ಮಂದಿ ಸಜೀವವಾಗಿ ಸುಟ್ಟುಹೋದರು.

★ ತಿರುಪತಿ ದೇವಸ್ಥಾನದವರು ' ಶ್ರೀ ವೆಂಕಟೇಶ್ವರಸ್ವಾಮಿ ವೈಭವ" ದ 5000 ಅಡಿಯ ವರ್ಣರಂಜಿತ ಸಾಕ್ಷ್ಯ ಚಿತ್ರ ತಯಾರಿಸಿರುವರು.

ನೀವು ಲಕ್ಷಾಧೀಶ್ವರರಾದರೂ ಆಗಬಹುದು

ಮೈಸೂರು ರಾಜ್ಯದ ಲಾಟರಿ

ಟಿಕೆಟ್ಟು ಒಂದಕ್ಕೆ ರೂ. 1-00

ಅಧಿಕೃತ ವ್ಯಾಪಾರಿಗಾರರು :

ಬಾಹುಸಾರ್ ಕಂಪೆನಿ,
ಓಲ್ಡ್ ಬ್ಯಾಂಕ್ ರೋಡ್,
ಮೈಸೂರು.

ಬಾಹುಸಾರ್ ಕಂಪೆನಿ,
ನೂರಡಿ ರಸ್ತೆ,
ಮೈಸೂರು-4

ಸೈಕಲ್ ರೇಸ್

ರಾಜ್ಯಮಟ್ಟದ ಸೈಕಲ್ ರೇಸು ಗಣರಾಜ್ಯ ಸಂದರ್ಭದಲ್ಲಿ ತಾ || 24 ರಂದು ಬೀಕೆರೆಯಿಂದ ಚಿಕ್ಕಮಗಳೂರಿಗೆ 45 ದೂರದಲ್ಲಿ ನಡೆಯಲಾಗುವುದೆಂದೂ ವರದಿಯಾಗಿದೆ.

ಉಗ್ರ ಆಂಜನೇಯನಲ್ಲ, ದಾಸಾಂಜನೇಯ

ಆಂಧ್ರ ಪ್ರದೇಶದ ಕೊಂಡಗಟ್ಟುವಿನಲ್ಲಿರುವ ಪ್ರಖ್ಯಾತ ದೇವಾಲಯದಲ್ಲಿನ ಆಂಜನೇಯ ಮೂರ್ತಿಯನ್ನು " ಉಗ್ರ ಆಂಜನೇಯ " ಎನ್ನಲಾಗುತ್ತಿತ್ತು — ಉಗ್ರ ದ ಮೇಲಿದ್ದ 40 ವರ್ಷಗಳ ಹಿಂದಿನ ಲೇಪನವನ್ನು ತೆಗೆಯಲಾಗಿ, ಈಗ ಅದು ದಾಸಾಂಜನೇಯವಾಗಿ ಕಂಡುಬಂದಿದೆ.

ಗಾಂಧಿ ದರ್ಶನ ರೈಲು

ರಾಷ್ಟ್ರಪಿತ ಮಹಾತ್ಮಾ ಗಾಂಧಿ ದರ್ಶನ ವಸ್ತುಪ್ರದರ್ಶನ ರೈಲು ಈಗ ಗುಂಟೂರಲ್ಲಿಗೆ ಬಂದಿದೆ – ಮಹಾತ್ಮಾ ಗಾಂಧಿಯವರ ಮೊಮ್ಮಗ ಕನು ಗಾಂಧಿಯವರು ಅದರ ಮೇಲ್ವಿಚಾರಣೆ ನೋಡಿಕೊಳ್ಳುತ್ತಿರುವರು.

ನಿಧನ

ಬೆಳಗಾಂನಿಂದ ಪ್ರಕಟವಾಗುವ ಸುಪ್ರಸಿದ್ಧ ದ್ವೈವಾರ ಕನ್ನಡ ಪತ್ರಿಕೆ ' ಸಂವೇಶ ' ದ ಸಂಪಾದಕರಾದ ಶ್ರೀ ಗೋಪಾಲರಾವ್ ದೇಶಪಾಂಡೆಯವರು ಭಾನುವಾರ ನಿಧನರಾದರೆಂದು ಪ್ರಕಟಿಸಲು ತುಂಬಾ ವಿಷಾದಿಸುತ್ತೇವೆ.

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ

ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆಯವೆಚ್ಚ ಸೇರಿ ವರ್ಷಕ್ಕೆ ರೂ 10-00

ಸೋಮವಾರ ಸಂಚಿಕೆ ವರ್ಷಕ್ಕೆ ರೂ 2

ಗೋರಕ್ಷಣೆಗೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ ಹೊಂಗನೂರು, ಚಾಮರಾಜನಗರ ತಾಲ್ಲೂಕ

2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಟ್ರಾಲಜರ್, 180 ನ್ಯೂ ಬ್ಲಾಕ್, ವಿದ್ಯಾರಣ್ಯಪುರಂ, ಮೈಸೂರು.

3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್, ಪ್ರಾಣಿದಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು

4 ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು

SHAKTI

SUDHA

A Superb Tonic

ದೇಶದ ಹಿತಕಾಗಿ

ಕುಟುಂಬ ಯೋಜನೆ

ಅಖಿಲ ಭಾರತದಲ್ಲಿ ಕೂಡಲೇ

ಗೋವಧೆ ನಿಷೇಧವಾಗಲಿ

ವುಡ್‌ಲಾಂಡ್ ಅಮೋಘ 3 ನೇ ವಾರ

ಅಮೋಘ ಪ್ರಾರಂಭ

ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆಪೂಜೆ

ನಟವರ್ಗ– ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ

ನಿರ್ದೇಶನ : ಪುಟ್ಟಣ್ಣ ಕಣಗಾಲ್ ಸಂಗೀತ : ವಿಜಯ ಭಾಸ್ಕರ್

[ದಿನ 3 ಪ್ರದರ್ಶನಗಳು]

ಆಪೆರಾ– ಅಮೋಘ 4ನೇ ವಾರ

.... ಅತ್ಯಮೋಘ ಹಿಂದಿ ಚಿತ್ರ ....

ನನ್ನ ಘರಿಷ್ಟೆ

ನಿರ್ದೇಶನ ಟಿ. ಪ್ರಕಾಶರಾವ್ ಸಂಗೀತ ಕಲ್ಯಾಣಜಿ ಆನಂದಜಿ (ಕಲರ್)

ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 6